# ನಾಟಕದ ಮೇಷ್ಟ್ರು ಹಂಚಿದ ಸಂತೋಷ



ನಂಜನಗೂಡಿನ ಹೆಗ್ಗಡಹಳ್ಳಿಯ ಸರ್ಕಾರಿ ಶಾಲೆಯಲ್ಲಿ ನಾಟಕದ ಮೇಷ್ಟ್ರಾಗಿರುವ **ಸಂತೋಷ ಗುಡ್ಡಿಯಂಗಡಿ**, ಶಾಲೆಯನ್ನೇ ಪ್ರಯೋಗಶಾಲೆಯಾಗಿಸಿಕೊಂಡು ಮಕ್ಕಳ ಕಲಿಕೆಯ ಸಾಧ್ಯತೆಗಳನ್ನು ಹೆಚ್ಚಿಸಿದವರು. ಕೈಬರಹದ ಪತ್ರಿಕೆಗಳ ಮೂಲಕ ವಿದ್ಯಾರ್ಥಿಗಳ ಸೃಜನಶೀಲ ಪ್ರತಿಭೆಗೆ ಅವಕಾಶ ಕಲ್ಪಿಸಿದ ಅವರು, ನಾಟಕ ಪ್ರದರ್ಶನಗಳ ಮೂಲಕ ವಿದ್ಯಾರ್ಥಿಗಳನ್ನು ನಾಡು ಸುತ್ತಿಸಿದರು ಹಾಗೂ ಅವರ ಮನೋವಿಕಾಸಕ್ಕೆ ಅವಕಾಶ ಕಲ್ಪಿಸಿದರು. ಬಹುರಾಷ್ಟ್ರೀಯ ಕಂಪನಿಗಳಿಗೆ ಅವುಗಳ ಉತ್ಪನ್ನಗಳ ಪ್ಲಾಸ್ಟಿಕ್ ತ್ಯಾಜ್ಯವನ್ನು ಹಿಂತಿರುಗಿಸುವ, ಹೆಗ್ಗಡಹಳ್ಳಿಯ ಶಾಲಾಮಕ್ಕಳ ಚಳವಳಿಯ ಹಿಂದಿರುವುದು ಇದೇ 'ಸಂತೋಷ್ ಮಾಷ್ಟ್ರು'. ಶಿಕ್ಷಕ ವೃತ್ತಿಯ ಅವರ ಅನುಭವ ಅವರದೇ ಮಾತುಗಳಲ್ಲಿ ಇಲ್ಲಿದೆ.

ಶಿಕ್ಷಕರಿಗೆ ನಮಸ್ಕಾರ



'ಅಳ್ಳೀಮರ' ರೂಪಿಸಿದ ಅರಳು ಪ್ರತಿಭೆಗಳು

ಮೇಷ್ಟ್ರಾಗುವುದು ಎಂದರೆ ಮತ್ತೆ ಮತ್ತೆ ಹೊಸದಾಗಿ ಕಲಿಯಲು ತೊಡಗಿಸಿಕೊಳ್ಳುವುದು ಎನ್ನುವುದು ನನ್ನ ಅನುಭವ. ಶಾಲೆಯ ನಾಟಕದಲ್ಲಿ ಮೇಷ್ಟ್ರ ಪಾತ್ರ ಮಾಡಿದ ನಾನು, ಒಂದು ದಿನ ನಿಜವಾಗಲೂ ಸರ್ಕಾರಿ ಶಾಲೆಯೊಂದಕ್ಕೆ ನಾಟಕದ ಮೇಷ್ಟ್ರಾಗಿ ನೇಮಕಗೊಂಡು ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹೆಮ್ಮರಗಾಲಕ್ಕೆ ಬಂದೆ.

ಶಾಲೆಯೊಳಗೆ ಕಾಲಿಡುತ್ತಲೇ 'ನಾಟಕದ ಮೇಷ್ಟ್ರಾ?' ಎಂಬ ಪ್ರಶ್ನಾರ್ಥಕ ನೋಟಗಳು ತೂರಿಬಂದವು. ಆ ಪ್ರಶ್ನೆ ನನ್ನದೂ ಆಗಿತ್ತು. 'ನಾಟಕದ ಮೇಷ್ಟ್ರು ಅಂದ್ರೆ ಏನು?' ಅನ್ನುವ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೊರಟದ್ದು ಹೆಮ್ಮರಗಾಲದಲ್ಲಿ.

### ಹೆಮ್ಮರ ಅರಳಿದ್ದು

ಮಕ್ಕಳಿಗೆ ಕತೆಗಳನ್ನು ಓದುತ್ತಾ, ಆಶು ಕತೆಗಳನ್ನು ಹೇಳುತ್ತಾ ಅವರ ಊರುಗಳೊಳಗೆ ಓಡಾಡಿದೆ. ಹೆಮ್ಮರಗಾಲ, ಬಸವಟ್ಟಿಗೆ, ನೇರಳೆ, ಭುಜಗಯ್ಯನಹುಂಡಿ, ಮಲ್ಲಹಳ್ಳಿ ಒಂದೊಂದು ಊರೂ ವಿಭಿನ್ನ. ಹೆಮ್ಮರಗಾಲದ ನಾಟಕ ಸೀನರಿಗಳು, ಬಸವಟ್ಟಿಗೆಯಲ್ಲಿ ಪ್ರತೀ ಶ್ರಾವಣಕ್ಕೂ ನಾಟಕವಾಡುವುದು, ಈ ಎಲ್ಲಾ ಊರಿನವರು ಕೊಡಗಿಗೆ ವಲಸೆ ಹೋಗುವುದು,